22/08/2021

TET-2021

ಪತ್ರಿಕೆ-1

ಸಂಭಾವ್ಯ ಕೀಉತ್ತರಗಳು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

KM

Question Booklet Sl. No.

# QUESTION BOOKLET – PAPER – I

## (KANNADA MEDIUM ONLY)

**SUBJECTS : Language – I, Language – II, Child Development and Pedagogy, Mathematics and Environmental Science**

**Maximum Marks : 150** | **09.30 A.M. to 12.00 P.M.** | **Max. Time : 2.30 Hours**

## INSTRUCTIONS TO THE CANDIDATES (Read Carefully)

**Note : Candidates are instructed to confirm**

- **Whether pre-printed O.M.R. has your name and register number printed on it.**
- **Whether pre-printed O.M.R. Sheet No. and QP Booklet No. are same.**
- **If the candidate uses the O.M.R./QP booklet which doesn't belong to him/her, such O.M.R. sheets are not considered for evaluation.**

1. The sealed Question Booklet contains 150 questions and O.M.R. Answer Sheets. Verify whether the given Question Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in any case of any discrepancies/doubt the question in English Medium is considered as valid.**
3. The Question Paper contains five parts I, II, III, IV and V consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 42 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 43 to 81 |
| Part – III | Child Development and Pedagogy (Kannada) – III | 61 to 90 | 82 to 86 |
| Part – III | Child Development and Pedagogy (English) – III | 61 to 90 | 87 to 90 |
| Part – IV | Mathematics (Kannada) – IV | 91 to 120 | 91 to 96 |
| Part – IV | Mathematics (English) – IV | 91 to 120 | 97 to 102 |
| Part – V | Environmental Science (Kannada) – V | 121 to 150 | 103 to 106 |
| Part – V | Environmental Science (English) – V | 121 to 150 | 107 to 109 |

4. **Part – I contains 30 Questions for the Language – I and Part – II contains 30 Questions for the Language-II. In this Question Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part – II (Language – II) in any Language other than the Language chosen in the Part-I (Language – I).
6. **Questions related to Part – III : Child Development and Pedagogy (Q. No. 61 to 90), Part – IV : Mathematics (Q. No. 91 to 120) and Part – V : Environmental Science (Q. No. 121 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the oval must be made with BLUE OR BLACK BALL POINT PEN ONLY. Any alteration in the answer counts as invalid.**
8. Each candidate is given carbonless O.M.R. sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

## PART – I

### ಭಾಷೆ – I

### ಕನ್ನಡ

**ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ :**

ಮಲೆನಾಡಿನ ಗೋಪಾಲಕರು ದಿಟ್ಟರು, ಕೆಚ್ಚೆದೆಯಾಳುಗಳು, ಅಲ್ಲದೆ ಕಷ್ಟಸಹಿಷ್ಣುಗಳು. ಗಿರಿವನಗಳಲ್ಲಿ ಮಳೆಬಿಸಿಲೆನ್ನದೆ ಅಲೆದು ಅಲೆದು ಗಟ್ಟಿಮುಟ್ಟಾಗಿರುವವರು. ಬಣ್ಣದಲ್ಲಿ ಅವರು ಸ್ವಲ್ಪ ಕಪ್ಪು. ಮೊರಡಾದ ಅವರ ದೇಹ ಅವರ ಜೀವನದ ಕಾಠಿಣ್ಯವನ್ನು ತೋರ್ಪಡಿಸುವುದು. ನಡೆನುಡಿಗಳಲ್ಲಿ ಬಹಳ ವಿನಯರು, ಗರ್ವವಿಲ್ಲ, ಅತ್ಯಾಶೆಯಿಲ್ಲದವರು. ಅವರು ದಿನವೂ ಬೆಳಗ್ಗೆ ಎದ್ದು ಗಂಜಿಯುಂಡು ತುರುಗಳನ್ನೆಲ್ಲಾ ಮೇಯಿಸಲು ಹೊಡೆದುಕೊಂಡು ಹೋಗುವರು. ಸಾಯಂಕಾಲ ಹಿಂತಿರುಗುವರು. ಅಷ್ಟು ಹೊತ್ತಿನವರೆಗೆ ದನಗಳನ್ನು ಹುಲ್ಲು ಹುಲುಸಾಗಿರುವ ಕಡೆ ಹೊಡೆದುಕೊಂಡು ಹೋಗಿ ಮೇಯಿಸುವರು. ಬೇಸಗೆಯಲ್ಲಿ ನಡು ಹಗಲಿನಲ್ಲಿ ಗೋವುಗಳನ್ನೆಲ್ಲ ನೆರಳಿರುವ ಕಡೆ ಅಟ್ಟಿಕೊಂಡು ಹೋಗುವರು. ಅಲ್ಲಿ ಅವು ಸ್ವಲ್ಪ ಹೊತ್ತು ಮಲಗಿ ಮೆಲುಕು ಹಾಕುತ್ತಾ ವಿಶ್ರಮಿಸಿಕೊಳ್ಳುತ್ತವೆ. ಹೀಗೆ ವಿಶ್ರಮಿಸಿಕೊಳ್ಳುವ ಸ್ಥಳ ಬದಲಾಗುವುದಿಲ್ಲ. ಈ ಸ್ಥಳವನ್ನು 'ತರುಬುಗುಣಿ' ಎನ್ನುತ್ತಾರೆ. ಕೊಳಲು ಪ್ರತಿಯೊಬ್ಬ ದನಗಾಹಿಯ ಪರಮಗೆಳೆಯ. ಅದಿಲ್ಲದಿದ್ದರೆ ದನಕಾಯುವ ಪದವಿಗೆ ಗೌರವ ಕಡಿಮೆ.

ನಮ್ಮೂರಿನಲ್ಲಿ 'ಹಿರಗ' ಎಂಬ ದನಕಾಯುವವನಿದ್ದಾನೆ. ಅವನು ದನಗಾಹಿಗಳಿಗೆಲ್ಲ ಮಾದರಿ. ಇತರರಂತೆಯೇ ದನಗಳನ್ನು ಮೇಯಿಸುವನು. ಆದರೆ ಅವನ ಕೊಳಲಗಾನ ಎಲ್ಲರನ್ನೂ ಆಕರ್ಷಿಸುತ್ತದೆ. ಕೊಳಲೂದುವುದರಲ್ಲಿ ಆತನ ಸಮಾನರಿಲ್ಲವೆಂದು ಅಕ್ಕಪಕ್ಕ ಹಳ್ಳಿಗಳಲ್ಲಿ ಪ್ರಸಿದ್ಧಿಯಾಗಿದ್ದಾನೆ. ಮಕ್ಕಳಿಗೆ ಅವನಲ್ಲಿ ಇಲ್ಲದ ಸಲಿಗೆ. ಹಿರಗ ಬಂದನೆಂದರೆ ಸರಿ ಹುಡುಗರೆಲ್ಲಾ ಅವನನ್ನು ಮುತ್ತಿಕೊಳ್ಳುತ್ತಾರೆ. ಮಕ್ಕಳು ಅವನಿಗೆ ಅನೇಕ ಕೆಲಸಗಳನ್ನು ಹಚ್ಚುತ್ತಿದ್ದರು. ಒಬ್ಬನು "ಹಿರಗಾ ನನಗೊಂದು ಕೊಳಲುಬೇಕು" ಮತ್ತೊಬ್ಬ "ನನಗೊಂದು ಬುಗುರಿ" ಇನ್ನೊಬ್ಬ "ನನಗೊಂದಿಷ್ಟು ಕಲ್ಲುಸಂಪಿಗೆ ಹಣ್ಣು" ಎಂದು ಕೆಲಸ ಹೇಳುತ್ತಾರೆ. ಅವನು ಯಾವುದಕ್ಕೂ ಇಲ್ಲ ಎನ್ನದೆ 'ಹೂ' ಎನ್ನುವನು ಕೈಲಾದ ಮಟ್ಟಿಗೆ ತಂದುಕೊಡುವನು.

ಹಿರಗ ತಾನು ಸಾಕಿರುವ ನಾಯಿಯ ಬಾಲ ಕಡಿದಿದ್ದಾನೆ. ಯಾರಾದರೂ ಅದು ಎಂಥಾ ನಾಯಿ ಎಂದರೆ ಅವನು ಸ್ವಲ್ಪವೂ ಸಂಕೋಚಪಡದೆ, 'ಚೀನೀ ನಾಯಿ' ಎನ್ನುತ್ತಾನೆ. ನಿಜವಾಗಿಯೂ ಅದು ಕಂತ್ರಿ ನಾಯಿಯೆ, ಅವನು ಮಾತ್ರ ಅದು ಜಾತಿ ನಾಯಿ ಎಂದು ನಂಬಿದ್ದಾನೆ. ಬಾಲ ಕಡಿದ ನಾಯಿಗಳೆಲ್ಲ ಚೀನೀ ನಾಯಿಗಳೇ ಆಗುತ್ತವೆಂದು ಆತನ ಸಿದ್ಧಾಂತ. ಇದು ಅವನೊಬ್ಬನ ನಂಬಿಕೆಯಲ್ಲ. ಸುತ್ತಮುತ್ತಲಿನ ಊರಿನವರ ಅಭಿಪ್ರಾಯವೆಲ್ಲ ಹಾಗೆಯೇ ಇದೆ.

1. ಮಲೆನಾಡಿನ ಗೋಪಾಲಕರು ಗಟ್ಟಿಮುಟ್ಟಾಗಿರಲು ಕಾರಣ

(1) ಗೋವುಗಳನ್ನು ಮೇಯಿಸುವುದರಿಂದ
(2) ಧೈರ್ಯಶಾಲಿಗಳಾಗಿರುವುದರಿಂದ
(3) ಮಳೆಬಿಸಿಲೆನ್ನದೆ ಅಲೆದು ಅಲೆದು
(4) ನಡೆನುಡಿಯಲ್ಲಿ ವಿನಯವಾಗಿರುವುದರಿಂದ

2. 'ತರುಬುಗುಣಿ' ಎಂದರೆ

(1) ಗೋವುಗಳು ಮಲಗಿ ವಿಶ್ರಮಿಸುವ ಸ್ಥಳ
(2) ಗೋವುಗಳ ಮೈ ತೊಳೆಯುವ ಸ್ಥಳ
(3) ಗೋಪಾಲಕರು ವಿಶ್ರಮಿಸುವ ಸ್ಥಳ
(4) ಗೋವುಗಳನ್ನು ಮಾರಾಟ ಮಾಡುವ ಸ್ಥಳ

3. ಮಲೆನಾಡಿನ ಪ್ರತಿಯೊಬ್ಬ ದನಗಾಹಿಯ ಗೆಳೆಯ

(1) ಗೋವು (2) ಕೊಳಲು (3) ಕಂಬಳಿ (4) ಕಾಡು

4. ಹಿರಗನು ಪಕ್ಕದ ಹಳ್ಳಿಗಳಲ್ಲೆಲ್ಲಾ ಪ್ರಸಿದ್ಧಿಯಾಗಿರುವುದು ಇದಕ್ಕೆ

(1) ದನ ಕಾಯುವುದಕ್ಕೆ (2) ನಾಯಿಯನ್ನು ಸಾಕಿರುವುದಕ್ಕೆ

(3) ಮಕ್ಕಳು ಹೇಳಿದ ಕೆಲಸ ಮಾಡುವುದಕ್ಕೆ (4) ಅವನ ಕೊಳಲ ಗಾನಕ್ಕೆ

5. ಮಕ್ಕಳು ಹಿರಗನನ್ನು ಕಂಡ ಕೂಡಲೆ ಹೀಗೆ ಮಾಡುತ್ತಾರೆ

(1) ಹೆದರಿ ಓಡುತ್ತಾರೆ (2) ಮುತ್ತಿಕೊಳ್ಳುತ್ತಾರೆ

(3) ಕೋಪಿಸಿಕೊಳ್ಳುತ್ತಾರೆ (4) ಬಯ್ಯುತ್ತಾರೆ

6. 'ದಿನದಿನವೂ' ಎಂಬುದು ಈ ವ್ಯಾಕರಣಾಂಶಕ್ಕೆ ಸೇರಿದೆ

(1) ಜೋಡಿ ಪದ (2) ಅನುಕರಣಾವ್ಯಯ (3) ನುಡಿಗಟ್ಟು (4) ದ್ವಿರುಕ್ತಿ

7. 'ಅತ್ಯಾಶೆ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(1) ಯಣ್‌ಸಂಧಿ (2) ವೃದ್ಧಿಸಂಧಿ (3) ಗುಣಸಂಧಿ (4) ಸವರ್ಣದೀರ್ಘಸಂಧಿ

8. ಬಾಲಕಡಿದ ನಾಯಿಯ ಬಗ್ಗೆ ಹಿರಗನ ಸಿದ್ಧಾಂತವಿದು

(1) ಅವು ಚೀನೀ ನಾಯಿಗಳಾಗುತ್ತವೆ ಎಂಬುದು (2) ಅವು ಕಂತ್ರಿ ನಾಯಿಗಳಾಗುತ್ತವೆ ಎಂಬುದು

(3) ಅವು ಜಾತಿ ನಾಯಿಗಳಾಗುತ್ತವೆ ಎಂಬುದು (4) ಅವು ಹುಚ್ಚು ನಾಯಿಗಳಾಗುತ್ತವೆ ಎಂಬುದು

**ಸೂಚನೆ : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

ನಾನು ಬರೆಯುತ್ತೇನೆ
ಕಾಳ ರಾತ್ರಿಗಳಲ್ಲಿ ಬಂದು ಕದ ತಟ್ಟುವ
ಧ್ವನಿಗಳನ್ನು ಕುರಿತು

ನಾನು ಬರೆಯುತ್ತೇನೆ
ಬಿರುಗಾಳಿಯಲ್ಲಿ ಕಡಲಿನ ಮೇಲೆ
ಹೊಯ್ದಾಡುವ ದೋಣಿಗಳನ್ನು ಕುರಿತು

ನಾನು ಬರೆಯುತ್ತೇನೆ
ನೆಲದಾಳಗಳಲ್ಲಿ ಮಲಗಿರುವ ಮೂಳೆಗಳ
ನಿಟ್ಟುಸಿರನ್ನು ಕುರಿತು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

ನಾನು ಬರೆಯುತ್ತೇನೆ
ಸಂಜೆಗತ್ತಲಿನಲ್ಲಿ ಕರಗುತ್ತಿರುವ
ಉಜ್ವಲವಾದ ಹಗಲುಗಳನ್ನು ಕುರಿತು

ನಾನು ಬರೆಯುತ್ತೇನೆ
ಶತಮಾನಗಳ ಕತ್ತಲನ್ನೊಡೆದು
ಮೆತ್ತಗೆ ತಲೆಯೆತ್ತುವ ಮೊಳಕೆಗಳನ್ನು ಕುರಿತು

ನಾನು ಬರೆಯುತ್ತೇನೆ
ಕೊನೆಯಿರದ ಬೀದಿಗಳ ಮೇಲೆ
ಕೀರ್ತಿಗೆ ಕಚ್ಚಾಡುವವರನ್ನು ಕುರಿತು

ಅರಳುವ ಕನಸುಗಳನ್ನು ಕುರಿತು
ಉರುಳುವ ಚಕ್ರಗಳನ್ನು ಕುರಿತು
ನಾನು ಬರೆಯುತ್ತೇನೆ, ನನ್ನ
ಒಂದೊಂದೇ ಎಲೆಯುದುರಿ
ನಾನು ಬೋಳಾಗುವುದನ್ನು ಕುರಿತು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 776058[illegible]101

9. ಬಿರುಗಾಳಿಯಲ್ಲಿ ದೋಣಿಗಳು ಇಲ್ಲಿ ಹೊಯ್ದಾಡುತ್ತವೆ
(1) ಮರಳಿನ ಮೇಲೆ
(2) ಮಣ್ಣಿನ ಮೇಲೆ
(3) ಕಡಲಿನ ಮೇಲೆ
(4) ರಸ್ತೆಯ ಮೇಲೆ

10. ಮಲಗಿರುವ ಮೊಳೆಗಳ ನಿಟ್ಟುಸಿರು ಇರುವುದು
(1) ಕಾಳ ರಾತ್ರಿಯಲ್ಲಿ
(2) ನೆಲದಾಳದಲ್ಲಿ
(3) ಕಡಲಿನಲ್ಲಿ
(4) ಬಿರುಗಾಳಿಯಲ್ಲಿ

11. ಸಂಜೆಯ ಕತ್ತಲಿನ ಉಜ್ವಲ ಹಗಲುಗಳು ಹೀಗೆ ಆಗುತ್ತಿವೆ
(1) ಕರಗುತ್ತಿವೆ
(2) ಸೊರಗುತ್ತಿವೆ
(3) ಬೆಳಗುತ್ತಿವೆ
(4) ಕುಣಿಯುತ್ತಿವೆ

12. ಕವಿ ಬರೆಯುತ್ತಿರುವುದು ಇದಕ್ಕೆ ಕಚ್ಚಾಡುವವರನ್ನು ಕುರಿತು
(1) ಬೀದಿ
(2) ಕೀರ್ತಿ
(3) ಮನೆ
(4) ಆಸೆ

13. ಕವಿ ಬರೆಯುವ 'ಮೊಳಕೆಗಳು' ಇಷ್ಟು ಕಾಲದ ಕತ್ತಲನ್ನು ಒಡೆದು ತಲೆಯೆತ್ತುತ್ತವೆ
(1) ಶತಮಾನ
(2) ದಿನ
(3) ವರ್ಷ
(4) ತಿಂಗಳು

14. 'ಮೊಳಕೆಗಳನ್ನು' ಈ ಪದದಲ್ಲಿರುವ ವಿಭಕ್ತಿ
(1) ಪ್ರಥಮಾ
(2) ತೃತೀಯಾ
(3) ಪಂಚಮಿ
(4) ದ್ವಿತೀಯಾ

15. 'ಕದ' ಪದದ ಅರ್ಥ
(1) ಕಿಟಕಿ
(2) ಬಾಗಿಲು
(3) ಮನೆ
(4) ನೆಲ

16. 'ಮಕ್ಕಳ ಮಾತು ಕಲಿಕೆಗೆ ಅವರ ಸಾಮಾಜಿಕ ಅಂತರ ಕ್ರಿಯೆಗಳು ಹಾಗೂ ಅನುಭವಗಳು ಅತ್ಯಂತ ಸಮೃದ್ಧವಾದ ಸಂಪನ್ಮೂಲಗಳು' ಈ ಚಿಂತನೆ ನೀಡಿರುವ ಭಾಷಾ ಶಾಸ್ತ್ರಜ್ಞ

(1) ಲಿವ್ ವೈಘೋಟ್ಸ್ಕಿ
(2) ಜೀನ್ ಫಿಯಾಜೆ
(3) ಬಿ.ಎಫ್. ಸ್ಕಿನ್ನರ್
(4) ನೋಮ್ ಚೋಮ್‌ಸ್ಕಿ

17. ಉತ್ತಮ ಆಲಿಸುವಿಕೆ ಕಣ್ಣಿನಿಂದಲೂ ಆಗುತ್ತದೆ ಎಂಬ ಮಾತಿನ ಹಿನ್ನಲೆ

(1) ಕಣ್ಣು ಮುಚ್ಚಿ ಕುಳಿತು ಸಾವಧಾನದಿಂದ ಕೇಳುವುದು
(2) ಕಿವಿಯಿಂದ ಆಲಿಸುತ್ತಾ, ಹೇಳುವವರ ಆಂಗಿಕ ಭಾವಗಳನ್ನು ನೋಡುತ್ತಾ ಆಲಿಸುವುದು
(3) ಕಣ್ಣು ಮುಚ್ಚಿ ಆಲಿಸುತ್ತಾ ವಿಷಯ ವಿಮರ್ಶೆ ಮಾಡುವುದು
(4) ಕಣ್ಣು ಮುಚ್ಚಿ ಆಲಿಸುತ್ತಾ ಹೇಳುವವರು ಮಾಡುವ ತಪ್ಪುಗಳನ್ನು ಗುರ್ತಿಸುವುದು

18. ಪ್ರಾಥಮಿಕ ಹಂತದ ಮಕ್ಕಳಲ್ಲಿ ಭಾಷೆಯ ಸೃಷ್ಟಿ ಮತ್ತು ಮೌಖಿಕ ಸಾಮರ್ಥ್ಯ ಬೆಳೆಸುವ ಒಂದು ಕ್ರಮ

(1) ವಾಕ್ಯವೃಂದವನ್ನು ಕಂಠಪಾಠ ಮಾಡಿ ಒಪ್ಪಿಸುವ ಚಟುವಟಿಕೆ
(2) ದೂರದರ್ಶನ ವಾರ್ತೆಗಳ ವಾಚನವನ್ನು ವೀಕ್ಷಿಸುವುದು
(3) ಪ್ರಬಂಧವನ್ನು ಬಾಯ್ದೆರೆಯಾಗಿ ಓದಿಸುವುದು
(4) ಚಿತ್ರಸರಣಿಯನ್ನು ನೋಡುತ್ತಾ ಕತೆ ಕಟ್ಟುವ ಚಟುವಟಿಕೆ

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

19. ಇವು ಪ್ರಧಾನವಾಗಿ ಭಾಷೆಯ ಸ್ವೀಕೃತ ಕೌಶಲಗಳು

(1) ಬರವಣಿಗೆ ಮತ್ತು ಮಾತು
(2) ಆಲಿಸುವಿಕೆ ಮತ್ತು ಮೌನವಾಚನ
(3) ಮಾತು ಮತ್ತು ಗಟ್ಟಿವಾಚನ
(4) ಓದು ಮತ್ತು ಬರಹ

20. ಪದ್ಯ ಬೋಧನೆಯನ್ನು ಹೆಚ್ಚು ಆಕರ್ಷಕವಾಗಿ ರೂಪಿಸಲು ಬಳಸಬಹುದಾದ ಪ್ರಮುಖ ಸಾಧನ

(1) ಕಪ್ಪು ಹಲಗೆ
(2) ಚಿತ್ರ ಪಟಗಳು
(3) ಬಹು ಮಾಧ್ಯಮ (ಮಲ್ಟಿಮೀಡಿಯಾ)
(4) ಪಠ್ಯಪುಸ್ತಕ

21. ಮಾಧ್ಯಮಿಕ ಹಾಗೂ ಸೆಕೆಂಡರಿ ಹಂತದಲ್ಲಿ ವ್ಯಾಕರಣ ಬೋಧಿಸುವ ಉತ್ತಮ ಕ್ರಮ

(1) ಪ್ರತ್ಯೇಕ ಅವಧಿಯಲ್ಲಿ ವ್ಯಾಕರಣ ಬೋಧನೆ
(2) ಶಾಸ್ತ್ರೀಯ ಕ್ರಮದಲ್ಲಿ ವ್ಯಾಕರಣ ಬೋಧನೆ
(3) ಸ್ವಯಂ ಬೋಧಿನಿ ಉಪಕ್ರಮಗಳ ಮೂಲಕ
(4) ಬೋಧನಾ-ಕಲಿಕಾ ಸಂದರ್ಭಗಳಲ್ಲಿ ಕ್ರಿಯಾತ್ಮಕ ವ್ಯಾಕರಣ ಬೋಧನೆ

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

22. ಪ್ರತಿ ಮಗುವಿನ ಕಲಿಕೆಯ ದೋಷಗಳನ್ನು ಚಿಕಿತ್ಸಕ ಕ್ರಮದಿಂದ ಪರಿಹರಿಸಿ ಕಲಿಕೆಯ ಮುಖ್ಯವಾಹಿನಿಗೆ ತರುವ ಉಪಕ್ರಮ

(1) ಪರಿಹಾರ ಬೋಧನೆ
(2) ಗೃಹಕಾರ್ಯ
(3) ಸ್ವಯಂ ಬೋಧಿನಿ ಕ್ರಮ
(4) ವೇಗ ವರ್ಧನ ಬೋಧನೆ

23. 4ನೇ ತರಗತಿಯ 12 ಜನ ವಿದ್ಯಾರ್ಥಿಗಳಿಗೆ ಬಾಯ್ದೆರೆ ವಾಚನದಲ್ಲಿ ದೋಷಗಳಿದೆ. ಈ ಸಮಸ್ಯೆಗೆ ಶಿಕ್ಷಕ ತಕ್ಷಣ ಕೈಗೊಳ್ಳಬೇಕಾದ ಪರಿಹಾರ ಕ್ರಮ

(1) ನಿಯಂತ್ರಿತ ಅಭ್ಯಾಸ
(2) ಭಾಷಾ ಪ್ರಯೋಗಾಲಯ
(3) ಗುಂಪು ಅಧ್ಯಯನ
(4) ಕ್ರಿಯಾ ಸಂಶೋಧನೆ

24. ವಿದ್ಯಾರ್ಥಿಗಳ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವ ಪ್ರಮುಖ ಮಾರ್ಗ

(1) ಮೌಖಿಕ ಸಂದರ್ಶನ
(2) ಪ್ರಬಂಧ ಮಾದರಿ ಪ್ರಶ್ನೆಗಳು
(3) ಪ್ರಾಯೋಗಿಕ ಚಟುವಟಿಕೆ
(4) ಬಾಯ್ದೆರೆ ವಾಚನ

25. ಮಕ್ಕಳ ಜ್ಞಾನೇಂದ್ರಿಯಗಳ ತರಬೇತಿಗೆ ಮಾಂಟೆಸೋರಿ ಅವರು ಸಲಹೆ ಮಾಡಿರುವ ಸಾಧನಗಳು

(1) ಭಾಷಾ ಪ್ರಯೋಗಾಲಯ
(2) ಕಲಿಕಾ ಏಣಿಗಳು
(3) ವ್ಯಾಯಾಮ ಮತ್ತು ಹಾಡುಗಳು
(4) ಪ್ರಬೋಧಕ ಉಪಕರಣಗಳು

26. ಮಕ್ಕಳಲ್ಲಿ ಸ, ಷ, ಶ, ಲ, ಳ, ಇಂತಹ ಅಕ್ಷರಗಳ ಉಚ್ಚಾರ ದೋಷ ಪರಿಹರಿಸಲು ಕೈಗೊಳ್ಳಬಹುದಾದ ಚಟುವಟಿಕೆ

(1) ವಾಕ್ ಶ್ರವಣ ವೈದ್ಯರಲ್ಲಿ ಚಿಕಿತ್ಸೆ ಕೊಡಿಸುವುದು
(2) ದೋಷವುಳ್ಳ ಅಕ್ಷರಗಳ ಸ್ಪಷ್ಟ ಉಚ್ಚಾರದ ಬಗ್ಗೆ ನಾಲಿಗೆ ಸುರಳಿ ಮೂಲಕ ಅಭ್ಯಾಸ ಮಾಡಿಸುವುದು
(3) ಉಚ್ಚಾರ ದೋಷವಿರುವ ಮಕ್ಕಳು ಹೆಚ್ಚು ಮಾತನಾಡದಂತೆ ಹೇಳುವುದು
(4) ಇಂತಹ ಮಕ್ಕಳು ಮಾತನಾಡದೆ ಬರೆದು ತೋರಿಸುವ ಅವಕಾಶ ಕಲ್ಪಿಸುವುದು

27. ಈ ಕೆಳಗಿನ ಭಾಷಾಂಶಗಳಲ್ಲಿ ತಪ್ಪಾಗಿರುವುದು ಇದು

(1) ಮಾತು ನಮನೀಯ ಸ್ವರೂಪ : ಬರಹ ಶಿಷ್ಯ, ಶಾಶ್ವತ ರೂಪ
(2) ಪದ್ಯ ಕಲಿಕೆಯಿಂದ ಆನಂದ : ಗದ್ಯಕಲಿಕೆಯಿಂದ ವಿಷಯ ಗ್ರಹಿಕೆ
(3) ಬಾಯ್ದೆರೆ ವಾಚನದಿಂದ ಸೃಜನ ಶೀಲತೆ : ಮೌನ ವಾಚನದಿಂದ ಧ್ವನಿ ಸಂಸ್ಕಾರ
(4) ಮಾತು ಓದಿಗೆ ಆಧಾರ : ಕಾಗುಣಿತ ಶುದ್ಧ ಬರಹಕ್ಕೆ ಆಧಾರ

28. ಶುದ್ಧ ಭಾಷಾ ಪ್ರಯೋಗದಿಂದ ಕೂಡಿದ ಪದವಿದು

(1) ರುದ್ರಾಶ್ರಮ (2) ವೃದ್ಧಾಶ್ರಮ (3) ವೃದಾಷ್ರಮ (4) ವೃದ್ಧಾಷ್ರಮ

29. 'ನಂಬಿಕೆ' ಈ ಪದದ ವಿರುದ್ಧಾರ್ಥಕ ಪದವಿದು

(1) ಅಪನಂಬಿಕೆ (2) ವಿಶ್ವಾಸ (3) ಅಗೌರವ (4) ಅವಮಾನ

30. 'ನೀರಿಗೆ ಹಾಕು' ಈ ನುಡಿಗಟ್ಟಿನ ಅರ್ಥ ಹೀಗಿದೆ

(1) ಮೋಸಮಾಡು
(2) ಸಮಾಧಾನ ಮಾಡು
(3) ತೊಂದರೆಗೆ ಸಿಕ್ಕಿಸು
(4) ವ್ಯರ್ಥಮಾಡು


ಮಾರ್ಗದರ್ಶಿ ಸ್ಟಡಿ ಸರ್ಕಲ್ ನಲ್ಲಿ GPSTR
ಹುದ್ದೆಗಾಗಿ ಆಯೋಜಿಸಿದ ಮಾದರಿ ಪರೀಕ್ಷೆ.

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

PART – II
Language – II
ENGLISH

**Read the passage below and answer the questions from 31 to 38 by choosing the most appropriate option.**

*Sindbad, the Sailor*

I bought a substantial amount of goods to trade and sailed on a ship with a number of my merchant friends. We placed ourselves in the care of the Almighty and set off. Soon we reached an island.

We decided to go ashore. My friends went to gather fruits and flowers, but I took my food packet to a place in the shade. I had a good meal and lay down to sleep under the trees. I don't know how long I slept, but when I awoke and looked out to sea, the ship had gone. I was all alone. Not knowing what to do, I climbed up to the top of a tall tree and looked over the island on all sides. In the distance, I could see something white and decided to find out what it was.

Soon, I came to what seemed like a huge white ball. When I touched it felt very smooth. It was so huge that I could not see the top of it and it was more than fifty paces in girth. There was no door on any side. It was too smooth to climb.

Suddenly, the sky above me became dark as if a huge cloud was covering it. Looking up, I saw that the darkness was caused by the shadow of a huge bird that was flying towards me. I had often heard sailors talk of a great and wonderful bird called 'roc'. This must be a roc, I thought, and the huge white ball, its egg!

**31.** Sindbad's friends went to gather

(1) fruits and flowers
(2) fish and crabs
(3) herbs and roots
(4) vegetables and greens

**32.** As soon as Sindbad woke up, he observed that

(1) his friends were returning
(2) his food packet was missing
(3) the ship had gone
(4) it was very dark all around

**33.** When Sindbad saw something white in the distance, he decided to

(1) shout for help
(2) hide himself somewhere
(3) inform his friends about it
(4) find out what it was

**34.** Sindbad had heard about the great and wonderful bird 'roc' from

(1) Sailors
(2) His ancestors
(3) Friends
(4) His relatives



ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

35. One word for 'a piece of land that is surrounded by water' is

(1) Shore (2) Sea (3) Island (4) Swamps

36. Sindbad saw a huge white ball. The underlined word is a/an

(1) noun (2) verb (3) adjective (4) adverb

37. I bought a substantial stock of goods to trade.
In the above sentence 'to infinitive' is

(1) bought (2) to trade (3) trade (4) goods

38. The correct prefix to be added to the word 'placed' is

(1) un (2) im (3) mis (4) in

**Read the text below and answer the questions from 39-45, by choosing the most appropriate option :**

*The Town Child*

by *Irene Thompson*

I live in the town
In a street;
It is crowded with traffic
And feet;
There are buses and motors
And trams;
I wish there were meadows
And lambs.

The houses all wait
In a row,
There is smoke everywhere
That I go.
I don't like the noises
I hear –
I wish there were woods
Very near.

There is only one thing
That I love,
And that is the sky
Far above,
There is plenty of room
In the blue
For castles of clouds
And me, too!

ಮಾರ್ಗದರ್ಶಿ ಸ್ಪರ್ಧಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

39. The reason why the poet dislikes the town is
(1) it has green meadows with animals
(2) it is crowded and noisy
(3) it has forests near it
(4) the sky is far above and blue

40. The town is smoky because
(1) buses, motors and trams are plying
(2) buildings are built with clouds
(3) houses are waiting in a row
(4) lambs are driven to the meadows

41. Through the poem, Irene Thompson expresses her
(1) love for her home town
(2) love of nature
(3) love for big vehicles
(4) love for blue rooms of castles

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

42. The only thing that the child likes in its town is
(1) busy streets
(2) the variety of vehicles
(3) the rows of houses
(4) the spacious sky

43. The word that rhymes with 'street' is
(1) meat
(2) sweat
(3) kite
(4) fright

44. The poet bought a pair of ________ socks which fit her ________ perfectly.
The correct words to be filled in the blanks are
(1) blew, feet
(2) blue, feat
(3) blue, feet
(4) blew, feat

45. I wish there were <u>meadows</u> and lambs. The underlined word is
(1) verb
(2) noun
(3) adverb
(4) adjective

**Answer the questions from 46 to 50 choosing the most appropriate option following the given directions :**

46. 'I took an umbrella ______________ it was raining'.
The correct conjunction to be filled in the blank is
(1) and (2) as (3) but (4) if

47. The past tense form of 'leave' is
(1) left (2) leave (3) leaving (4) live

48. 'Jupiter is __________ biggest planet in ______ solar system.'
The articles to be used here are
(1) a, the (2) an, the (3) the, the (4) a, an

49. The correct word to make compound word for the word 'body' is
(1) arms (2) bent (3) face (4) guard

50. Read the following jumbled words and choose the correct option which makes a meaningful sentence :
more/classroom/six/has/this/than/windows.
(1) This classroom has more than six windows.
(2) This classroom has six windows than more.
(3) This classroom has six more than windows.
(4) This classroom has more windows than six.

ಮಾರ್ಗದರ್ಶಿ ಸ್ಪರ್ಧಾ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

51. Written language is only an attempt to represent
(1) Students (2) Intelligence
(3) Spoken language (4) Fluency

52. Dialogues are commonly used in developing speaking skill among the students. Dialogue is
(1) a conversation between five persons
(2) a conversation between three persons in a familiar context.
(3) a conversation between many persons.
(4) a conversation between two persons.

53. There are FAs and SAs to ensure the level of Language Learning. In this context, the full form of SA is
(1) Summative Assessment (2) Standard Assessment
(3) Second Assessment (4) Systematic Assessment

54. Students usually enjoy tongue twisters. The tongue twisters provide a joyful practice in speaking.
Choose the tongue twister from the following :
(1) Where there is a will, there is a way
(2) Where there are the sea shells, she sells on the sea shore
(3) Jack of all, master of none
(4) Kill two birds with one stone

55. We read different texts in day to day life.
The main objective of reading any text is
(1) to give information
(2) to get information
(3) to pass exams
(4) to become an expert

56. Role-play in an English drama gives
(1) Only listening experience
(2) Only speaking experience
(3) Both listening and speaking experience
(4) Both reading and writing experience

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

57. The text type used more in most of the school text book is
(1) Report
(2) Dialogue
(3) Recipe
(4) Story

58. A teacher wants to orient students on reference skills.
Which of the following is helpful in finding the parts of speech of any word ?
(1) Text book
(2) Dictionary
(3) Work book
(4) Grammar book

59. "Close your eyes, listen to different sounds. Later list all the sounds you heard."
This activity involves
(1) Reading and writing
(2) Listening and reading
(3) Listening and writing
(4) Listening and speaking

60. A teacher uses a video-clip in the class. She asks them to watch it and describe a thing of their choice. The teaching learning material used here is
(1) Video clip
(2) Class
(3) Students
(4) Teacher


ಮಾರ್ಗದರ್ಶಿ ಸ್ಟಡಿ ಸರ್ಕಲ್ ನಲ್ಲಿ ತರಬೇತಿ ಪಡೆದು
GPSTR ಹುದ್ದೆಗೆ ಆಯ್ಕೆ ಆದ ಅಭ್ಯರ್ಥಿ ಶ್ರೀ
ಹನುಮೇಶ್ ಇವರಿಂದ ಓದಿನ ಅನುಭವ ಹಂಚಿಕೆ.

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್,
ಕೊಪ್ಪಳ. ಮೊ: 7760582101

# KANNADA MEDIUM
## PART – III
## CHILD DEVELOPMENT AND PEDAGOGY

**61.** ಇವುಗಳಲ್ಲಿ ಮಗುವಿನ ವಿಕಾಸವನ್ನು ಸೂಚಿಸುವ ಒಂದು ಹೇಳಿಕೆ

(1) ಗಾತ್ರ, ಉದ್ದ, ಎತ್ತರ ಮತ್ತು ತೂಕದಲ್ಲಿನ ಹೆಚ್ಚಳ

(2) ದೇಹದ ನಿರ್ದಿಷ್ಟ ಭಾಗಗಳಲ್ಲಿ ಆಗುವ ಬದಲಾವಣೆಗಳು

(3) ಮಗುವಿನ ದೇಹದ ಭಾಗಗಳಲ್ಲಿನ ಬದಲಾವಣೆಗಳಲ್ಲದ ಒಟ್ಟಾರೆ ಬದಲಾವಣೆಗಳು

(4) ಅಳತೆ ಮಾಡಲು ಸಾಧ್ಯವಾಗುವ ದೇಹದ ಬದಲಾವಣೆಗಳು

**62.** ''ವಿಕಾಸವು ಯಾವಾಗಲೂ ಕೊನೆಗೊಳ್ಳದ ಪ್ರಕ್ರಿಯೆ'' ಎಂಬುದನ್ನು ಸೂಚಿಸುವ ತತ್ವ

(1) ನಿರಂತರತೆಯ ತತ್ವ

(2) ಸಮಗ್ರತೆಯ ತತ್ವ

(3) ವಿಕಾಸದ ನಿರ್ದೇಶನಗಳ ತತ್ವ

(4) ಅಂತರ ಸಂಬಂಧದ ತತ್ವ

**63.** ತನ್ನೊಂದಿಗೆ ಮತ್ತು ಇತರರೊಂದಿಗೆ ಬೆರೆಯುವ ಒಂದು ಮಗುವಿನ ಸಾಮರ್ಥ್ಯ

(1) ಮಾನಸಿಕ ವಿಕಾಸ (2) ಸಾಮಾಜೀಕರಣ (3) ಪರಿಪಕ್ವತೆ (4) ಬುದ್ಧಿವಂತಿಕೆ

**64.** ಬೆಳವಣಿಗೆ ಮತ್ತು ವಿಕಾಸದ ಪ್ರಕ್ರಿಯೆಯಲ್ಲಿ, ಸಾಮಾಜೀಕರಣದ ಅರ್ಥ

(1) ಸಮಾಜದ ನಿಯಮಗಳನ್ನು ಸೂಕ್ತವಾಗಿ ಅರ್ಥಮಾಡಿಕೊಳ್ಳುವುದು

(2) ಸ್ವಯಂ ಸ್ವ-ನಿಯಮಗಳನ್ನು ಸೃಜಿಸಿಕೊಳ್ಳುವುದು

(3) ನಮ್ಮ ಸುತ್ತಲಿನ ಜನರನ್ನು ಗೌರವಿಸುವುದು

(4) ಸಾಮಾಜಿಕ ವಾತಾವರಣಕ್ಕೆ ಹೊಂದಿಕೊಳ್ಳುವುದು ಮತ್ತು ಹೊಂದಾಣಿಕೆ ಮಾಡಿಕೊಳ್ಳುವುದು

**65.** ವೈಗೊಟ್ಸ್ಕಿ ಅವರ ಪ್ರಕಾರ, ಕಲಿವಿನ ಪ್ರಕ್ರಿಯೆಯಲ್ಲಿ

(1) ಭಾಷೆಯು ಆಲೋಚನಾ ಪ್ರಕ್ರಿಯೆಯನ್ನು ಗಾಢವಾಗಿ ಪ್ರಭಾವಿಸುತ್ತದೆ

(2) ಮೊದಲು ಆಲೋಚನೆ ಮತ್ತು ನಂತರ ಭಾಷೆಯು ಹೊರಹೊಮ್ಮುತ್ತದೆ

(3) ಆಲೋಚನೆ ಮತ್ತು ಮಕ್ಕಳ ಭಾಷೆಯು ಬೇರೆ ಬೇರೆ ಆಗಿರುತ್ತದೆ

(4) ಭಾಷೆಯ ಯಾವುದೇ ಪ್ರಭಾವ ಇರುವುದಿಲ್ಲ

**66.** ಪ್ರಗತಿಶೀಲ ತರಗತಿಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೇರಣೆಗೊಳಿಸುವುದು

(1) ಎಲ್ಲಾ ವಿಷಯಗಳಲ್ಲಿ ವಿಷಯ ಜ್ಞಾನವನ್ನು ಪಡೆದುಕೊಳ್ಳಲು

(2) ಕಲಿವಿನ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿ ಅಂತರ್‌ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು

(3) ಕಲಿವಿನ ವಿಷಯಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರಲು

(4) ವಹಿಸಿದ ಕಾರ್ಯಗಳನ್ನು ಪೂರ್ಣಗೊಳಿಸಲು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ,2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

67. ಪ್ರಗತಿಶೀಲ ಶಿಕ್ಷಣದ ಒಂದು ಪ್ರಮುಖ ಲಕ್ಷಣ
(1) ಆಗಾಗ್ಗೆ ವಿದ್ಯಾರ್ಥಿಗಳ ಮಾಪನ
(2) ಕಲಿವಿನ ಎಲ್ಲಾ ವಿಷಯಗಳಿಗೆ ಒತ್ತು
(3) ಬದಲಿಸಬಹುದಾದ ವೇಳಾಪಟ್ಟಿ ಮತ್ತು ತರಗತಿ ಸಿದ್ಧತೆಗಳು
(4) ವಿಷಯಗಳನ್ನು ಕಲಿಯಲು ವಿವಿಧ ಶೈಕ್ಷಣಿಕ ಮಾರ್ಗೋಪಾಯಗಳು

68. ಇತರೆ ಜನರನ್ನು ಅರ್ಥಮಾಡಿಕೊಳ್ಳುವ, ಅವರ ಅಭಿಪ್ರೇರಣೆಗಳನ್ನು, ಉದ್ದೇಶಗಳನ್ನು ಗುರ್ತಿಸುವ ಮತ್ತು ಅವರೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವೇ
(1) ಅಂತರ್‌ವ್ಯಕ್ತೀಯ ಬುದ್ಧಿಶಕ್ತಿ
(2) ಪರಸ್ಪರ ವ್ಯಕ್ತೀಯ ಬುದ್ಧಿಶಕ್ತಿ
(3) ಸಾಮಾಜಿಕ ಬುದ್ಧಿಶಕ್ತಿ
(4) ತಾರ್ಕಿಕ ಬುದ್ಧಿಶಕ್ತಿ

69. ಕಲಿಕಾರ್ಥಿಗಳಲ್ಲಿನ ವ್ಯಕ್ತಿ ಭಿನ್ನತೆಗಳ ಸೂಕ್ತ ಜ್ಞಾನವು ಶಿಕ್ಷಕನಿಗೆ
(1) ತನ್ನ ಬೋಧನಾ ವಿಧಾನಗಳನ್ನು ಹೊಂದಿಸಿಕೊಳ್ಳಲು ಸಹಾಯ ಮಾಡುತ್ತದೆ
(2) ವಿದ್ಯಾರ್ಥಿಗಳನ್ನು ಉನ್ನತ ತರಗತಿಗಳಿಗೆ ತೇರ್ಗಡೆಗೊಳಿಸಲು ಸಹಾಯ ಮಾಡುತ್ತದೆ
(3) ಶಿಕ್ಷಣದ ಹೊಸ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲು ಸಹಾಯ ಮಾಡುತ್ತದೆ
(4) ತನ್ನ ವಿಷಯ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಹಾಯ ಮಾಡುತ್ತದೆ

70. ಸಾಮರ್ಥ್ಯಾಧಾರಿತ ಗುಂಪನ್ನು ಮಾಡುವುದು ಮತ್ತು ಪಠ್ಯಕ್ರಮವನ್ನು ತರಗತಿಯ ವಿದ್ಯಾರ್ಥಿಗಳಿಗೆ ಹೊಂದಿಸಿಕೊಳ್ಳುವುದರಿಂದ ಶಿಕ್ಷಕನಿಗೆ ಆಗುವ ಒಂದು ಉಪಯೋಗ
(1) ಪ್ರತಿಭಾವಂತ ಮಕ್ಕಳ ಅಗತ್ಯತೆಗಳಿಗೆ ಸ್ಪಂದಿಸಬಹುದು
(2) ವೈಯುಕ್ತಿಕ ಭಿನ್ನತೆಗಳನ್ನು ಕಡಿಮೆಗೊಳಿಸಬಹುದು
(3) ಮಾಪನಕ್ಕಾಗಿ ಪ್ರಮಾಣಬದ್ಧ ಸಾಧನವನ್ನು ಆಯ್ಕೆ ಮಾಡಿಕೊಳ್ಳಬಹುದು
(4) ತರಗತಿಯಲ್ಲಿ ಶಿಸ್ತನ್ನು ಮೂಡಿಸಬಹುದು

71. ಲಿಂಗ ಪಕ್ಷಪಾತವನ್ನು ತರಗತಿಗಳಲ್ಲಿ ಕಡಿಮೆಗೊಳಿಸುವ ಒಂದು ಕ್ರಮ
(1) ಹೆಣ್ಣು ಮತ್ತು ಗಂಡು ಮಕ್ಕಳಿಗೆ ವಿಭಿನ್ನ ಕಾರ್ಯಗಳನ್ನು ವಹಿಸುವುದು
(2) ಗಂಡಸರು ಮತ್ತು ಹೆಂಗಸರು ಇಬ್ಬರ ಉದಾಹರಣೆಗಳನ್ನು ನೀಡುವುದು
(3) ಹುಡುಗರು ಮತ್ತು ಹುಡುಗಿಯರಿಗೆ ಒಂದೇ ರೀತಿಯ ಶೈಕ್ಷಣಿಕ ಕಾರ್ಯಗಳನ್ನು ನೀಡುವುದು
(4) ತರಗತಿಯಲ್ಲಿ ಹುಡುಗರು ಮತ್ತು ಹುಡುಗಿಯರನ್ನು ಬೇರ್ಪಡಿಸುವುದು

72. ವಿದ್ಯಾರ್ಥಿಗಳ ಮೌಲ್ಯಾಂಕನದ ಒಂದು ಪ್ರಮುಖ ಅಂಶ
(1) ಸಮಗ್ರ ಕಲಿಕೆಯನ್ನು ತಿಳಿಯುವುದು
(2) ಒಂದು ನಿರ್ದಿಷ್ಟ ಹಂತದಲ್ಲಿ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ನಿರ್ಧರಿಸುವುದು
(3) ಉನ್ನತ ಕಲಿಕೆಯನ್ನು ಉತ್ತೇಜಿಸುವುದು
(4) ಅವರ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ವರ್ಗೀಕರಣ (grade) ಮಾಡುವುದು

73. ಅಪೇಕ್ಷಿತ ಕಲಿಕೆಯ ಗುರಿಗಳೆಡೆಗಿನ ವಿದ್ಯಾರ್ಥಿಗಳ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು, ಶಿಕ್ಷಕರು ಮೌಲ್ಯಾಂಕನ ಮಾಡಬೇಕಾದ ಅಂಶ

(1) ಕಲಿಕಾ ವಿಷಯಗಳಲ್ಲಿ (scholastic subjects) ವಿದ್ಯಾರ್ಥಿಗಳ ಕಾರ್ಯಕ್ಷಮತೆ

(2) ಒದಗಿಸಿದ ಕಲಿವಿನ ಅನುಭವಗಳ ಪರಿಣಾಮಕಾರತೆ

(3) ಕಲಿವಿನ ಫಲಗಳು ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿವೆ

(4) ಪಠ್ಯವಸ್ತು ಎಷ್ಟರ ಮಟ್ಟಿಗೆ ಪೂರ್ಣಗೊಳಿಸಲ್ಪಟ್ಟಿದೆ

74. ''ಕಲಿಕೆಗಾಗಿ ಮೌಲ್ಯಾಂಕನ'' (Assessment for learning) ದಲ್ಲಿನ ಮುಖ್ಯ ಕೇಂದ್ರಿತ ಅಂಶ

(1) ಎಲ್ಲಾ ವಿದ್ಯಾರ್ಥಿಗಳ ಪ್ರಸ್ತುತದ ಕಲಿಕೆಯನ್ನು ಉತ್ತಮ ಪಡಿಸುವುದು

(2) ವಿಭಿನ್ನ ಭಾಗೀದಾರರ ಮೇಲೆ ಕಲಿಕೆಯ ಜವಾಬ್ದಾರಿಯನ್ನು ವಹಿಸುವುದು

(3) ಸಾಕ್ಷ್ಯ ಆಧಾರಿತ ಮೌಲ್ಯಾಂಕನವನ್ನು ಅಭಿವೃದ್ಧಿಪಡಿಸುವುದು

(4) ಕಲಿಕೆಯ ಕೌಶಲಗಳನ್ನು ಬೆಳೆಸುವುದು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

75. ಶಾಲಾ ಆಧಾರಿತ ಮೌಲ್ಯಾಂಕನದ ಒಂದು ಪ್ರಮುಖ ಲಕ್ಷಣ

(1) ಅದು ಮೌಲ್ಯಾಂಕನವನ್ನು ನಿರಂತರವಾಗಿಸುತ್ತದೆ

(2) ಅಂಕಗಳನ್ನು ನೀಡುವುದನ್ನು ಶಿಕ್ಷಕರಿಗೆ ಸುಲಭಗೊಳಿಸುತ್ತದೆ

(3) ಮಕ್ಕಳನ್ನು ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲು ಶಿಕ್ಷಕರಿಗೆ ಸುಲಭವಾಗುತ್ತದೆ

(4) ಸೂಕ್ಷ್ಮ ಹಂತದಲ್ಲಿ ಶಿಕ್ಷಣದ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಸಹಾಯಮಾಡುತ್ತದೆ

76. ಕಲ್ಪನೆಗಳು, ವಸ್ತುಗಳು ಅಥವಾ ಸಮಸ್ಯೆಗೆ ಪರಿಹಾರಗಳನ್ನು ನವೀನವಾಗಿ, ಸೂಕ್ತವಾಗಿ ಮತ್ತು ಉಪಯುಕ್ತವಾಗುವಂತೆ ಉತ್ಪನ್ನಗೊಳಿಸುವ ಒಂದು ಮಗುವಿನ ಸಾಮರ್ಥ್ಯವೇ

(1) ಪ್ರತಿಭಾನ್ವಿತತೆ

(2) ಕ್ರಿಯಾಶೀಲತೆ

(3) ಅಭಿಕ್ಷಮತೆ

(4) ಮನೋಧೋರಣೆ

77. ಒಳಗೊಳ್ಳುವ ಶಿಕ್ಷಣದ ಹಿಂದಿರುವ ತಾರ್ಕಿಕತೆ

(1) ವೈವಿಧ್ಯಮಯ ಸಮಾಜದ ಅಗತ್ಯತೆಗಳಿಗೆ ಶಾಲೆಗಳು ಸ್ಪಂದಿಸುವುದು

(2) ವಿಶೇಷ ಮಕ್ಕಳಿಗೆ ಕನಿಕರವನ್ನು ತೋರುವುದು ಮತ್ತು ಅವರಿಗೆ ಸೌಲಭ್ಯಗಳನ್ನು ಒದಗಿಸುವುದು

(3) ವಿಶೇಷ ಅಗತ್ಯತೆಯ ಮಕ್ಕಳನ್ನು ತರಗತಿಗಳಲ್ಲಿ ಇತರೆ ಮಕ್ಕಳಿಂದ ಬೇರ್ಪಡಿಸದಿರುವುದು

(4) ಪ್ರತಿ ಮಗುವಿನ ಶೈಕ್ಷಣಿಕ ನಿರ್ವಹಣೆಯ ಮಾನದಂಡ ಒಂದೇ ಆಗಿರುವುದು

**78.** ಡಿಸ್ಲೆಕ್ಸಿಯ ಪದವು ಸಂಬಂಧ ಹೊಂದಿರುವುದು

(1) ಸಾಮಾಜಿಕ ಅಸ್ವಸ್ಥತೆಯೊಂದಿಗೆ
(2) ಮಾನಸಿಕ ಅಸ್ವಸ್ಥತೆಯೊಂದಿಗೆ
(3) ಗಣಿತೀಯ ಅಸ್ವಸ್ಥತೆಯೊಂದಿಗೆ
(4) ಓದುವಿಕೆಯ ಅಸ್ವಸ್ಥತೆಯೊಂದಿಗೆ

**79.** ಪ್ರತಿಭಾನ್ವಿತ ಮಕ್ಕಳ ಒಂದು ಲಕ್ಷಣ

(1) ಅವರು ಶಿಕ್ಷಕರಿಂದ ಸ್ವತಂತ್ರರಾಗಿರುತ್ತಾರೆ
(2) ತರಗತಿಗಳಲ್ಲಿ ಅತೀ ಚಟುವಟಿಕೆಯಿಂದ ಇರುತ್ತಾರೆ
(3) ತೀರ್ಮಾನಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳುತ್ತಾರೆ
(4) ಬಹಿರ್ಮುಖಿ ಸ್ವಭಾವ

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, [illegible]
ಕೊಪ್ಪಳ. ಮೊ: 7760582101

**80.** ಜ್ಞಾನಾತ್ಮಕ ಚಟುವಟಿಕೆಯ ಪ್ರಕ್ರಿಯೆಯಾಗಿ ಆಲೋಚನೆಯು

(1) ಮಗುವನ್ನು ಹಗಲುಗನಸು ಕಾಣುವಂತೆ ಮಾಡುತ್ತದೆ
(2) ಮಾನಸಿಕವಾಗಿ ಸಮಸ್ಯೆಗಳನ್ನು ಬಿಡಿಸಲು ಮಗುವನ್ನು ಮುನ್ನಡೆಸುತ್ತದೆ
(3) ಯತ್ನ ಮತ್ತು ದೋಷದಿಂದ ಕಲಿಯಲು ಮಗುವನ್ನು ಮುನ್ನಡೆಸುತ್ತದೆ
(4) ಸನ್ನಿವೇಶಗಳನ್ನು ಕುಶಲತೆಯಿಂದ ಮುನ್ನಡೆಸುವಂತೆ ಮಾಡುತ್ತದೆ

**81.** ಒಂದು ಮಗು ನಿರ್ದಿಷ್ಟ ಹಂತದಲ್ಲಿ ಆಲೋಚಿಸುವ ಮತ್ತು ಕಲಿಯುವ ಕೌಶಲಗಳನ್ನು ಬೆಳೆಸಿಕೊಳ್ಳುತ್ತದೆ. ಇದರ ಸೂಚಕ

(1) ಚಿತ್ರಗಳನ್ನು ನೋಡಿ ಕಥೆಗಳನ್ನು ಹೇಳುವುದು
(2) ದೈಹಿಕವಾಗಿ ಬೆಳೆಯುವುದು
(3) ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವುದು
(4) ವಯಸ್ಕರ ಪ್ರಶ್ನೆಗಳಿಗೆ ಉತ್ತರಿಸುವುದು

**82.** ಮಕ್ಕಳ ಕಲಿಕೆಯ ಸಾಮರ್ಥ್ಯವನ್ನು ಪ್ರಭಾವಿಸುವ ಒಂದು ಅಂಶ

(1) ಶಾಲಾ ಪಠ್ಯಕ್ರಮ ಮತ್ತು ಪಠ್ಯವಸ್ತು
(2) ಶಿಕ್ಷಕರ ಮನೋಧೋರಣೆ ಮತ್ತು ವರ್ತನೆ
(3) ಶಾಲೆಯಲ್ಲಿನ ಶಿಸ್ತು
(4) ಆಕಾಂಕ್ಷೆ ಮತ್ತು ಅಭಿಪ್ರೇರಣೆಯ ಮಟ್ಟ

**83.** ಕಲಿಕೆಯಿಂದಾಗುವ ವರ್ತನೆಯಲ್ಲಿನ ಬದಲಾವಣೆಗಳು

(1) ತಾತ್ಕಾಲಿಕ
(2) ಸಾಪೇಕ್ಷವಾಗಿ ಶಾಶ್ವತ
(3) ಶಾಶ್ವತವೂ ಅಲ್ಲ ತಾತ್ಕಾಲಿಕವೂ ಅಲ್ಲ
(4) ಆಗಾಗ್ಗೆ ಬದಲಾವಣೆಗೆ ಒಳಗಾಗುತ್ತಿರುತ್ತದೆ

**84.** ಒಂದು ಮಗು ಸಮಸ್ಯಾ ಪರಿಹಾರ ಕ್ರಮದಿಂದ ಪರಿಕಲ್ಪನೆ ಒಂದನ್ನು ಕಲಿಯಲು ಪ್ರೇರಣೆಗೊಂಡಿದೆ. ಇಲ್ಲಿ ಮಗುವಿನ ಕಲಿಕೆಯ ಮೊದಲ ಹಂತ

(1) ಮಾಹಿತಿಯ ವಿಶ್ಲೇಷಣೆ
(2) ಪ್ರಕಲ್ಪನೆಯ ಪರಿಶೀಲನೆ
(3) ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು
(4) ಪರಿಹಾರವನ್ನು ಪಡೆಯುವುದು

85. ಮಕ್ಕಳು ಒಂದು ವಿಷಯವನ್ನು ಪರಿಣಾಮಕಾರಿಯಾಗಿ ಕಲಿಯುವುದು

(1) ತರಗತಿಯಲ್ಲಿ ಶಿಕ್ಷಕರು ತುಂಬಾ ಶಿಸ್ತಿನಿಂದ ಇದ್ದಾಗ

(2) ಮಕ್ಕಳು ನಿಯಮಿತವಾಗಿ ತರಗತಿಗಳಿಗೆ ಹಾಜರಾದಾಗ

(3) ಮಕ್ಕಳಿಗೆ ಸೂಕ್ತವಾಗಿ ಬಹುಮಾನ ನೀಡಿದಾಗ

(4) ಕಲಿಕಾ ವಿಷಯವನ್ನು ಉತ್ತಮವಾಗಿ ಆಯೋಜಿಸಿದಾಗ

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

86. ಕಲಿವಿನ ಸಾಮಾಜಿಕ ಸಂದರ್ಭವು ಒಳಗೊಳ್ಳುವ ಅಂಶ

(1) ಜ್ಞಾನ ರಚನಾ ಪ್ರಕ್ರಿಯೆಯ ಸಾಂದರ್ಭೀಕರಣ

(2) ಸಾಂದರ್ಭಿಕ ಜ್ಞಾನವನ್ನು ಪಡೆದುಕೊಳ್ಳುವುದು

(3) ಪ್ರಯೋಗದ ಮೂಲಕ ಜ್ಞಾನವನ್ನು ಪಡೆದುಕೊಳ್ಳುವುದು

(4) ಶಿಕ್ಷಕರಿಂದ ಜ್ಞಾನವನ್ನು ಸ್ವೀಕರಿಸುವುದು

87. ಅರ್ಥಪೂರ್ಣ ಕಲಿಕೆ ಉಂಟಾಗುವುದು

(1) ವೈಯುಕ್ತಿಕ ಅನುಭವಗಳಿಂದ ಜ್ಞಾನ ರಚನೆಗಳು ಕ್ರಿಯಾಶೀಲವಾಗಿ ಸೃಷ್ಟಿಯಾದಾಗ

(2) ವಯಸ್ಕರು ತಮಗೆ ತಿಳಿದಿರುವುದನ್ನು ಬೋಧಿಸಿದಾಗ

(3) ವಯಸ್ಕರನ್ನು ಅನುಕರಣೆ ಮಾಡಿದಾಗ

(4) ನೀಡಿದ ಮಾಹಿತಿಯನ್ನು ನಿಷ್ಕ್ರಿಯವಾಗಿ ಸ್ವೀಕರಿಸಿದಾಗ

88. ಬಾಹ್ಯ ಅಭಿಪ್ರೇರಣೆಗೆ ಒಂದು ಉದಾಹರಣೆ

(1) ಒಂದು ಮಗು ಮನೆಗೆಲಸವನ್ನು ಮಾಡಿ ಸ್ವಯಂ ಕಲಿಯುವುದು

(2) ಒಂದು ಮಗು ವಿಷಯಗಳನ್ನು ಅರ್ಥಮಾಡಿಕೊಳ್ಳಲು ಮನೆಗೆಲಸ ಮಾಡುವುದು

(3) ಶಿಕ್ಷಕರು ಪ್ರತಿ ಮನೆಗೆಲಸಕ್ಕೆ ಅಂಕವನ್ನು ನೀಡುತ್ತಾರೆ ಎಂಬುದರಿಂದ ಒಂದು ಮಗು ಮನೆಗೆಲಸವನ್ನು ಮಾಡುವುದು

(4) ಒಂದು ಮಗು ಮನೆಗೆಲಸವನ್ನು ಮಾಡಲು ಸಂತೋಷ ಪಡುವುದು

89. ಕಲಿಕೆಯ ಜ್ಞಾನಾತ್ಮಕ ಮನೋವಿಜ್ಞಾನದ ಕೇಂದ್ರಿತ ಅಂಶ

(1) ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ಬಂಧನದ ರಚನೆ

(2) ಮಾನಸಿಕ ಪ್ರಕ್ರಿಯೆಗಳು ಮತ್ತು ಜ್ಞಾನದ ರಚನೆ

(3) ವೀಕ್ಷಣೆ ಮತ್ತು ಕಲಿಕೆ

(4) ಪ್ರಯೋಗಗಳು ಮತ್ತು ಕಲಿವಿನ ಪ್ರಕ್ರಿಯೆಗಳು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

90. ಕಲಿಕೆಯನ್ನು ಪ್ರಭಾವಿಸುವ ಒಂದು ವೈಯುಕ್ತಿಕ ಅಂಶ

(1) ಶಾಂತ ಮತ್ತು ಸೌಹಾರ್ದ ವಾತಾವರಣ

(2) ಅಭ್ಯಾಸ ಕಾರ್ಯ, ಪುನರಾವರ್ತನೆ ಮತ್ತು ಅಭ್ಯಾಸ

(3) ವಿಷಯಗಳ ಸ್ವಭಾವ

(4) ಸಿದ್ಧತೆ ಮತ್ತು ಇಚ್ಛಾಶಕ್ತಿ


ಮಾರ್ಗದರ್ಶಿ ಸ್ಟಡಿ ಸರ್ಕಲ್ ಕೊಪ್ಪಳದಲ್ಲಿ
ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು

# KANNADA MEDIUM
## PART – IV
## MATHEMATICS


**91.** ರೂ. 8,400 ಗಳನ್ನು p, q, r ಮತ್ತು s ಗಳಿಗೆ "p" ಮತ್ತು "q", "q" ಮತ್ತು "r" ಹಾಗೂ "r" ಮತ್ತು "s" ಗಳು ಕ್ರಮವಾಗಿ 2 : 3, 4 : 5 ಮತ್ತು 6 : 7 ಅನುಪಾತದಲ್ಲಿರುವಂತೆ ಹಂಚಲಾಗಿದೆ. ಹಾಗಾದರೆ "p" ಯ ಭಾಗವು

(1) ರೂ. 1,280
(2) ರೂ. 8,210
(3) ರೂ. 8,600
(4) ರೂ. 1,380

**92.** ತಾಯಿ ಮತ್ತು ಮಗಳ ಈಗಿನ ವಯಸ್ಸಿನ ಅನುಪಾತವು 7 : 2 ಆಗಿದೆ. 10 ವರ್ಷಗಳ ನಂತರ ಅವರ ವಯಸ್ಸಿನ ಅನುಪಾತವು 9 : 4 ಆದಾಗ, ತಾಯಿಯ ಈಗಿನ ವಯಸ್ಸು

(1) 25 ವರ್ಷಗಳು
(2) 40 ವರ್ಷಗಳು
(3) 30 ವರ್ಷಗಳು
(4) 35 ವರ್ಷಗಳು

**93.** ದತ್ತ ಚಿತ್ರದಲ್ಲಿ $l$ ಸಮಾನಾಂತರ m ಆದಾಗ $\theta$ ದ ಬೆಲೆಯು






ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್,
ಕೊಪ್ಪಳ. ಮೊ: 77605[illegible]101


(1) 40°
(2) 20°
(3) 10°
(4) 30°


94. ದತ್ತ ಚಿತ್ರದಲ್ಲಿ $\angle ABD = 50°$, $\angle FEC = 120°$ ಆದಾಗ (x + y) ನ ಬೆಲೆಯು




ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

(1) 60°　(2) 70°　(3) 80°　(4) 100°

95. ದತ್ತ ಚಿತ್ರದಲ್ಲಿ $\angle ABC = 120°$, $\angle EDC = 100°$ ಮತ್ತು AB ಸಮಾನಾಂತರ DE. $\angle BCD$ ಯ ಬೆಲೆಯು




(1) 20°　(2) 30°　(3) 50°　(4) 40°

96. ಒಂದು ನಿಯಮಿತ ನವಭುಜಾಕೃತಿಯ ಒಂದು ಒಳಕೋನದ ಮತ್ತು ಅದರ ಒಂದು ಹೊರಕೋನದ ಅಳತೆಯ ಅನುಪಾತವು

(1) 7 : 2　(2) 2 : 5　(3) 5 : 2　(4) 4 : 5

97. ಒಂದು ಪಂಚಭುಜಾಕೃತಿಯ ಒಂದು ಕೋನವು 140° ಉಳಿದ ಕೋನಗಳು 1 : 2 : 3 : 4 ರ ಅನುಪಾತದಲ್ಲಿದ್ದಾಗ ಇದರ ಅತಿ ದೊಡ್ಡ ಕೋನದ ಪರಿಮಾಣವು

(1) 150°
(2) 160°
(3) 170°
(4) 180°

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

98. ಸಮಾಂತರ ಚತುರ್ಭುಜದ ಎರಡು ಬಾಹುಗಳು 5 : 4 ರ ಅನುಪಾತದಲ್ಲಿವೆ. ಅದರ ಸುತ್ತಳತೆಯು 54 cm ಆದಾಗ ದೊಡ್ಡ ಬಾಹುವಿನ ಅಳತೆಯು

(1) 10 cm
(2) 12 cm
(3) 15 cm
(4) 20 cm

99. ಒಂದು ದೋಣಿಯು ನೀರಿನ ಪ್ರವಾಹದ ದಿಕ್ಕಿನಲ್ಲಿ ಎರಡು ಬಂದರುಗಳ ನಡುವಿನ ದೂರವನ್ನು 4 ಗಂಟೆಗಳಲ್ಲಿ ಕ್ರಮಿಸುತ್ತದೆ. ಅದೇ ದೂರವನ್ನು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಕ್ರಮಿಸಲು 5 ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಪ್ರವಾಹದ ವೇಗವು 2 Kmph ಆದಾಗ ನಿಂತ ನೀರಿನಲ್ಲಿ ದೋಣಿಯ ವೇಗವು

(1) 15 Kmph
(2) 18 Kmph
(3) 20 Kmph
(4) 24 Kmph

100. ವೃತ್ತದಲ್ಲಿ ಎಳೆದ ಜ್ಯಾವು ವೃತ್ತ ಕೇಂದ್ರದಲ್ಲಿ 60° ಕೋನವನ್ನು ಉಂಟುಮಾಡುತ್ತಿದ್ದರೆ, ಜ್ಯಾ ಮತ್ತು ವೃತ್ತ ತ್ರಿಜ್ಯದ ಅನುಪಾತ,


(1) 1 : 2
(2) 1 : 1
(3) $\sqrt{2} : 1$
(4) 2 : 1


101. $\Delta PQR$ ನಲ್ಲಿ M ಮತ್ತು N ಗಳು ಕ್ರಮವಾಗಿ PQ ಮತ್ತು PR ನ ಮಧ್ಯಬಿಂದುಗಳಾಗಿವೆ. QR + MN = 12 ಮಾನಗಳಾದರೆ, QR – MN ನ ಬೆಲೆ


(1) 10 ಮಾನಗಳು
(2) 8 ಮಾನಗಳು
(3) 6 ಮಾನಗಳು
(4) 4 ಮಾನಗಳು


ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

**102.** ಒಂದು ಘನದ ಜಾಲಾಕೃತಿಯು

(1) 

(2) 

(3) 

(4) 

**103.** ಒಂದು ಘನದ ಕರ್ಣದ ಉದ್ದವು $\sqrt{12}$ cm ಆದರೆ, ಅದರ ಘನಫಲ

(1) $8\ cm^3$ (2) $12\ cm^3$ (3) $24\ cm^3$ (4) $\sqrt[3]{2}\ cm^3$

**104.** ಒಂದು ಸಂಖ್ಯೆಯ ಐದನೇ-ಮೂರರಷ್ಟು ಎರಡನೇ ಸಂಖ್ಯೆಯ ಶೇಕಡ 70 ರಷ್ಟಿದೆ. ಮೊದಲನೆ ಮತ್ತು ಎರಡನೇ ಸಂಖ್ಯೆಗಳಿಗಿರುವ ಅನುಪಾತ

(1) 4 : 7 (2) 3 : 4 (3) 7 : 8 (4) 7 : 6

**105.** $23.\overline{43}$ ರ $\frac{p}{q}$ ರೂಪ

(1) $\frac{2320}{99}$ (2) $\frac{2343}{100}$ (3) $\frac{2343}{99}$ (4) $\frac{2320}{199}$

**106.** $6^4 \times 8^6 \times 10^8 \times 12^{10}$ ರ ಗುಣಲಬ್ಧದಲ್ಲಿರುವ ಅವಿಭಾಜ್ಯ ಅಪವರ್ತನಗಳ ಸಂಖ್ಯೆ

(1) 80 (2) 64 (3) 72 (4) 48

**107.** 28, 36, 58, 92, 26, 10, 42, 8, 12, 18 ದತ್ತಾಂಶಗಳ ವ್ಯಾಪ್ತಿಯ ಸಹಗುಣಕ

(1) 0.64 (2) 0.74 (3) 0.84 (4) 0.94

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

108. 10 ಸಂಖ್ಯೆಗಳ ಸರಾಸರಿಯು 20 ಆಗಿದೆ. ಪ್ರತಿಯೊಂದು ಸಂಖ್ಯೆಯಿಂದ 5 ನ್ನು ಕಳೆದರೆ, ಸಂಖ್ಯೆಗಳ ಹೊಸ ಸರಾಸರಿ

(1) 20 (2) 18 (3) 19 (4) 15

109. ಒಂದು ಶಾಲೆಯಲ್ಲಿ ಮೂರನೇ ಒಂದು ಭಾಗದ ವಿದ್ಯಾರ್ಥಿಗಳು ಬಾಲಕರಾಗಿದ್ದಾರೆ. ಇವರಲ್ಲಿ $2/5$ ರಷ್ಟು ಬಾಲಕರು ಹಿಂದಿನ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಹಾಗಾದರೆ ಹಿಂದಿನ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಬಾಲಕರ ಭಾಗವು

(1) $\frac{3}{10}$ (2) $\frac{2}{7}$ (3) $\frac{2}{15}$ (4) $\frac{1}{12}$

110. ಒಂದು ತರಗತಿಯಲ್ಲಿ 30 ವಿದ್ಯಾರ್ಥಿಗಳಿದ್ದು, ಅದರಲ್ಲಿ $\frac{5}{6}$ ರಷ್ಟು ವಿದ್ಯಾರ್ಥಿಗಳು ಭಿನ್ನರಾಶಿಯನ್ನು ಕ್ಲಿಷ್ಟಕರ ಎಂದು ಭಾವಿಸುತ್ತಾರೆ. ಹಾಗಾದರೆ ಭಿನ್ನರಾಶಿಯು ಸುಲಭ ಎಂದು ಭಾವಿಸುವ ವಿದ್ಯಾರ್ಥಿಗಳ ಸಂಖ್ಯೆಯು

(1) 25 (2) 20 (3) 15 (4) 5

111. ಭಿನ್ನರಾಶಿ $\frac{1}{12}$ ನ್ನು ಪಡೆಯಲು $\frac{2}{7}$ ರಿಂದ ಕಳೆಯಬೇಕಾಗಿರುವ ಭಿನ್ನರಾಶಿಯು

(1) $\frac{6}{81}$ (2) $\frac{7}{80}$ (3) $\frac{17}{84}$ (4) $\frac{11}{12}$

112. ಒಂದು ಬೀಜಗಣಿತೀಯ ಸಮೀಕರಣ $(x - 2y)^2$ ನಲ್ಲಿ $y^2$ ನ ಸಂಖ್ಯಾ ಗುಣಕವು

(1) 1 (2) 2 (3) –2 (4) 4

113. $\frac{(0.2)^3 + (0.3)^3}{(0.5)^2}$ ನ ಬೆಲೆಯು

(1) $\frac{8}{15}$ (2) $\frac{7}{50}$ (3) $\frac{5}{18}$ (4) $\frac{1}{50}$

114. 0.01 ನ್ನು ಶೇಕಡವಾರು ಪ್ರಮಾಣದಲ್ಲಿ ವ್ಯಕ್ತಪಡಿಸಿದಾಗ

(1) 1% (2) 0.1% (3) 10% (4) 5%

115. ಒಬ್ಬ ವಿದ್ಯಾರ್ಥಿಯು ಒಂದು ಗಣಿತ ಘಟಕ ಪರೀಕ್ಷೆಯಲ್ಲಿ 20 ಅಂಕಗಳಿಗೆ 12 ಅಂಕಗಳನ್ನು ಗಳಿಸುತ್ತಾನೆ. ಹಾಗಾದರೆ ಆತನ ಶೇಕಡವಾರು ಅಂಕಗಳು

(1) 50% (2) 60% (3) 30% (4) 75%

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

116. A ಮತ್ತು B ಇಬ್ಬರು ಒಂದು ಕೆಲಸವನ್ನು ಒಟ್ಟಿಗೆ 15 ದಿನಗಳಲ್ಲಿ ಮುಗಿಸುತ್ತಾರೆ. B ಒಬ್ಬನೇ ಆ ಕೆಲಸವನ್ನು 20 ದಿನಗಳಲ್ಲಿ ಮುಗಿಸಿದರೆ, A ಒಬ್ಬನೇ ಆ ಕೆಲಸವನ್ನು ಮುಗಿಸಲು ತೆಗೆದುಕೊಳ್ಳುವ ಸಮಯವು

(1) 60 ದಿನಗಳು (2) 45 ದಿನಗಳು (3) 40 ದಿನಗಳು (4) 30 ದಿನಗಳು

117. ಒಂದು ನೀರಿನ ಟ್ಯಾಂಕ್‌ನ ಸಾಮರ್ಥ್ಯವು 100 ಗ್ಯಾಲನ್‌ಗಳಾದರೆ, ಟ್ಯಾಂಕ್‌ನ ಸಾಮರ್ಥ್ಯವು ಲೀಟರ್‌ಗಳಲ್ಲಿ

(1) 400 ಲೀಟರ್‌ಗಳು (2) 458.5 ಲೀಟರ್‌ಗಳು

(3) 378.5 ಲೀಟರ್‌ಗಳು (4) 300 ಲೀಟರ್‌ಗಳು

118. ಮಕ್ಕಳಲ್ಲಿ ವಿಷಯಾಂಶದ ಪರಿಕಲ್ಪನೆಯನ್ನು ಅಭ್ಯಸಿಸಿಕೊಳ್ಳುವಲ್ಲಿ ಅವಲಂಬಿತವಾದ ಅಂಶ

(1) ಕಿರು ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಗಳನ್ನು ಹೆಚ್ಚು-ಹೆಚ್ಚಾಗಿ ನಡೆಸುವುದು

(2) ಶೋಧನಾತ್ಮಕ ವಿಧಾನದ ಮೂಲಕ ವಿಷಯಾಂಶ ಕಲಿಕೆಯನ್ನು ಅನುಕೂಲಿಸುವುದು

(3) ವಿದ್ಯಾರ್ಥಿಗಳ ನಡುವೆ ಸ್ಪರ್ಧೆ ಏರ್ಪಡಿಸುವುದು

(4) ಪಠ್ಯಪುಸ್ತಕ ಆಧಾರಿತ ಕಲಿಕಾ ವಿಧಾನ ಅಳವಡಿಸಿಕೊಳ್ಳುವುದು

119. ಮಕ್ಕಳ ಕಲಿಕೆಯಲ್ಲಿ ರಚನಾವಾದದ ನೋಟವು ಪ್ರಮುಖವಾಗಿ ಪ್ರತಿನಿಧಿಸುವುದು

(1) ಮಕ್ಕಳು ಸ್ವತಃ ಜ್ಞಾನವನ್ನು ಉಂಟುಮಾಡಿಕೊಳ್ಳಲು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ

(2) ಮಕ್ಕಳು ಸ್ವತಃ ಜ್ಞಾನವನ್ನು ಪಡೆಯಲು ಪಠ್ಯವಸ್ತುವಿನ ಮೇಲೆ ಅವಲಂಬಿತರಾಗುತ್ತಾರೆ

(3) ಮಕ್ಕಳು ಸ್ವತಃ ಜ್ಞಾನವನ್ನು ಪಡೆಯಲು ಯಾವುದೇ ಸಕ್ರಿಯ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ

(4) ಮಕ್ಕಳು ಸ್ವತಃ ಜ್ಞಾನವನ್ನು ಪಡೆಯಲು ತಮಗಿಂತ ಹಿರಿಯ ವಿದ್ಯಾರ್ಥಿಗಳ ಮೇಲೆ ಅವಲಂಬಿತರಾಗುತ್ತಾರೆ

120. ಜೀನ್-ಪಿಯಾಜೆಯವರ ಜ್ಞಾನಾತ್ಮಕ ಬೆಳವಣಿಗೆಯ ಪೂರ್ವ-ಕ್ರಿಯಾ ಹಂತದ ಪ್ರಕಾರ ಮಗು ಹೊಂದಿರಬಹುದಾದ ಸಾಮಾನ್ಯ ಲಕ್ಷಣ

(1) ಪ್ರಾಕಲ್ಪನಾ ನಿಗಮನ ಯೋಚನೆ

(2) ವಸ್ತುಗಳ ಅಡಗಿಸುವಿಕೆ ಮತ್ತು ಕ್ರಮಾಗತ ಜೋಡಣಾ ಸಾಮರ್ಥ್ಯ

(3) ಅಮೂರ್ತ ಆಲೋಚನಾ ಬೆಳವಣಿಗೆ

(4) ಸಂಜ್ಞಾ ಆಟ ಮತ್ತು ಚಿತ್ರಣಾ ಸಾಮರ್ಥ್ಯ

SPACE FOR ROUGH WORK

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760682101

# KANNADA MEDIUM
## PART – V
## ENVIRONMENTAL SCIENCE

121. 150 ದ್ರವ್ಯರಾಶಿಯುಳ್ಳ ಚೆಂಡನ್ನು ಬ್ಯಾಟ್‌ನಿಂದ ಹೊಡೆದಾಗ, ಅದು 3 ಮೀ./ಸೆ. ಜವದೊಂದಿಗೆ ಚಲಿಸುತ್ತದೆ, ಹಾಗಾದರೆ ಚೆಂಡಿನ ಆವೇಗ

(1) 0.45 kg m/sec
(2) 4.5 kg m/sec
(3) 450 kg m/sec
(4) 45 kg m/sec

122. ಕಾರ್ಪೆಟ್‌ನಲ್ಲಿರುವ ಧೂಳಿನ ಕಣಗಳನ್ನು ಕಾರ್ಪೆಟ್ ಬಡಿಯುವ ಮೂಲಕ ತೆಗೆಯಲಾಗುತ್ತದೆ. ಇಲ್ಲಿ ಬಳಸಲಾಗುವ ಭೌತಶಾಸ್ತ್ರ ನಿಯಮ

(1) ನ್ಯೂಟನ್ನನ ವಿಶ್ವ ಗುರುತ್ವ ನಿಯಮ
(2) ನ್ಯೂಟನ್ನನ ಚಲನೆಯ ಮೂರನೆಯ ನಿಯಮ
(3) ನ್ಯೂಟನ್ನನ ಚಲನೆಯ ಎರಡನೆಯ ನಿಯಮ
(4) ನ್ಯೂಟನ್ನನ ಚಲನೆಯ ಮೊದಲನೆಯ ನಿಯಮ

123. 2 kg ದ್ರವ್ಯರಾಶಿಯುಳ್ಳ ವಸ್ತುವು ಭೂಮಿಯ ಕಡೆಗೆ ಆಕರ್ಷಿಸಲ್ಪಡುವ ಬಲ

(1) 19.6 N
(2) 9.8 N
(3) 1.96 N
(4) 0.196 N

124. ಒಬ್ಬ ಬಾಲಕನು 10 ಮೀ./ಸೆ. ವೇಗದಲ್ಲಿ ಚಲಿಸುತ್ತಿರುವ ಮೇರಿಗೊರೌಂಡ್‌ನಲ್ಲಿ ಸವಾರಿ ಮಾಡುತ್ತಿದ್ದಾನೆಂದರೆ ಬಾಲಕನು

(1) ನಿಶ್ಚಲ ಸ್ಥಿತಿಯಲ್ಲಿದ್ದಾನೆ
(2) ವೇಗೋತ್ಕರ್ಷವಿಲ್ಲದೆ ಚಲಿಸುತ್ತಿದ್ದಾನೆ
(3) ವೇಗೋತ್ಕರ್ಷದೊಂದಿಗೆ ಚಲಿಸುತ್ತಿದ್ದಾನೆ
(4) ಏಕರೂಪ ಜವದೊಂದಿಗೆ ಚಲಿಸುತ್ತಿದ್ದಾನೆ

125. ಬೆಳಕಿನ ಪ್ರತಿಫಲನಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ

(1) ಪತನ ಬೆಳಕಿಗಿಂತ ಪ್ರತಿಫಲಿತ ಬೆಳಕು ಹೆಚ್ಚು ಪ್ರಕಾಶಮಾನವಾಗಿರುತ್ತದೆ
(2) ಪ್ರತಿಫಲಿತ ಬೆಳಕು ಏಳು ಬಣ್ಣಗಳಾಗಿ ವಿಭಜನೆ ಹೊಂದುತ್ತದೆ
(3) ಪತನ ಕೋನವು ಪ್ರತಿಫಲನ ಕೋನಕ್ಕೆ ಸಮವಾಗಿರುತ್ತದೆ
(4) ಪ್ರತಿಫಲಿತ ಬೆಳಕು ಲಂಬದ ಕಡೆಗೆ ಬಾಗುತ್ತದೆ

126. ವಿದ್ಯುದಾವೇಶದ ಮೂಲಮಾನ

(1) ಆಂಪೀಯರ್
(2) ವೋಲ್ಟ್
(3) ಕೂಲಂಬ್
(4) ಓಮ್

127. ಗೃಹಗಳಲ್ಲಿ ವಿದ್ಯುತ್ ಬಳಕೆಯನ್ನು ಕಡಿಮೆಮಾಡಲು ನಾವು ಬಳಸುವ ಗೃಹೋಪಕರಣಗಳು

(1) ಯಾವುದು ಕಡಿಮೆ ಶಕ್ತಿಯನ್ನು ಸೆಳೆಯುತ್ತದೆ
(2) ಯಾವುದು ಕಡಿಮೆ ಶಾಖವನ್ನು ಉತ್ಪತ್ತಿಮಾಡುತ್ತದೆ
(3) ಯಾವುದು ಅಧಿಕ ವೋಲ್ಟೇಜ್‌ನಲ್ಲಿ ಕೆಲಸ ಮಾಡುತ್ತದೆ
(4) ಯಾವುದು ಹೆಚ್ಚು ವಿದ್ಯುತ್ತನ್ನು ಸೆಳೆಯುತ್ತದೆ

128. ಒಬ್ಬ ವ್ಯಕ್ತಿಯು 40 ಸೆ. ಮೀ. ಗಿಂತ ಅಧಿಕ ದೂರದಲ್ಲಿರುವ ವಸ್ತುಗಳನ್ನು ಮಾತ್ರ ನೋಡಲು ಶಕ್ತನು. ಆತನ ದೋಷ ಪರಿಹಾರಕ್ಕೆ ಆತನಿಗೆ ಬಳಸಲು ಸೂಚಿಸುವ ಮಸೂರದ ಸಾಮರ್ಥ್ಯ

(1) – 2.5 D (2) + 2.5 D (3) – 1.25 D (4) 1.5 D

129. ಕೃತಕ ಪರಿಸರ ವ್ಯವಸ್ಥೆಗೆ ಉದಾಹರಣೆ

(1) ಅರಣ್ಯ
(2) ಸಾಗರ
(3) ಮೃಗಾಲಯ
(4) ಹುಲ್ಲುಗಾವಲು

130. ನಾಲ್ಕನೇ ಪೋಷಣಾ ಸ್ತರದಲ್ಲಿರುವ ಶಕ್ತಿಯ ಪ್ರಮಾಣ 8 kJ ಆದರೆ, ಉತ್ಪಾದಕರ ಹಂತದಲ್ಲಿ ದೊರಕುವ ಶಕ್ತಿಯ ಪ್ರಮಾಣ

(1) 8000 kJ (2) 40 kJ (3) 80 kJ (4) 800 kJ

131. ವಾಯುಮಾಲಿನ್ಯದ ಮೊದಲ ದೊಡ್ಡ ದುರಂತ

(1) ನ್ಯೂಯಾರ್ಕ್ ಸ್ಮಾಗ್
(2) ಲಂಡನ್ ಸ್ಮಾಗ್
(3) ಪ್ಯಾರಿಸ್ ಸ್ಮಾಗ್
(4) ದಿಲ್ಲಿ ಸ್ಮಾಗ್

132. ಅಮೃತಾದೇವಿ ಬಿಷ್ನೋಯ್ ಈ ಮರವನ್ನು ಉಳಿಸಲು ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು

(1) ಆಲದ ಮರ
(2) ಶ್ರೀಗಂಧದ ಮರ
(3) ಕೇಜ್ರಿ ಮರ
(4) ಅರಳಿ ಮರ

133. ''ಜೀವನದ ಸಿಬ್ಬಂದಿ'' ಎಂದು ಕರೆಯಲಾಗುವ ಜೈವಿಕ ಅಣು

(1) ಲಿಪಿಡ್‌ಗಳು
(2) ಪ್ರೋಟಿನ್‌ಗಳು
(3) ವಿಟಮಿನ್‌ಗಳು
(4) ಕಾರ್ಬೋಹೈಡ್ರೇಟ್‌ಗಳು

134. ದೇಹದಲ್ಲಿ 'ಎ ಜೀವಸತ್ವದ' ಕೊರತೆಯಿಂದ ಉಂಟಾಗುವ ನ್ಯೂನತಾ ಕಾಯಿಲೆ

(1) ಸ್ಕರ್ವಿ
(2) ಬೆರಿಬೆರಿ
(3) ರಿಕೆಟ್ಸ್
(4) ಇರುಳುಗಣ್ಣು

135. ಹೆಚ್ಚುವರಿ ಪ್ರಮಾಣದಲ್ಲಿ ನೀರಿನಲ್ಲಿರುವ ಈ ಕೆಳಗಿನ ಯಾವ ಲವಣ ಹಲ್ಲುಗಳ ಮೇಲೆ ಹಳದಿ ಅಥವಾ ಕಂದು ಬಣ್ಣದ ಕಲೆಗಳಿಗೆ ಕಾರಣವಾಗುತ್ತದೆ ?

(1) ಬ್ರೋಮಿನ್
(2) ಕ್ಲೋರಿನ್
(3) ಫ್ಲೋರಿನ್
(4) ಅಯೋಡಿನ್

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

136. ಕ್ವಾಷಿಯೋರ್‌ಕರ್ ರೋಗ ಉಂಟಾಗಲು ಕಾರಣ

(1) ಪ್ರೋಟೀನ್ ಕೊರತೆ
(2) ವಿಟಮಿನ್ ಕೊರತೆ
(3) ಕಾರ್ಬೋಹೈಡ್ರೇಟ್ ಕೊರತೆ
(4) ಕೊಬ್ಬಿನ ಕೊರತೆ

137. ICBN ವಿಸ್ತೃತ ರೂಪ

(1) ಇಂಡಿಯನ್ ಕಾಂಗ್ರೆಸ್ ಆಫ್ ಬಯಲಾಜಿಕಲ್ ನೇಮ್ಸ್
(2) ಇಂಟರ್‌ನ್ಯಾಷನಲ್ ಕೋಡ್ ಆಫ್ ಬಟಾನಿಕಲ್ ನೋಮೆನ್‌ಕ್ಲೇಚರ್
(3) ಇಂಟರ್‌ನ್ಯಾಷನಲ್ ಕಾಂಗ್ರೆಸ್ ಆಫ್ ಬಯಲಾಜಿಕಲ್ ನೇಮ್ಸ್
(4) ಇಂಡಿಯನ್ ಕೋಡ್ ಆಫ್ ಬಟಾನಿಕಲ್ ನೋಮೆನ್‌ಕ್ಲೇಚರ್

138. ದೇಹದಲ್ಲಿ ಅತಿ ದೊಡ್ಡ ಗ್ರಂಥಿ

(1) ಯಕೃತ್ತು
(2) ಮೇದೋಜೀರಕ ಗ್ರಂಥಿ
(3) ಗ್ಯಾಸ್ಟ್ರಿಕ್ ಗ್ರಂಥಿ
(4) ಅಡ್ರಿನಲ್ ಗ್ರಂಥಿ

139. ಜಠರದಲ್ಲಿ ಹೈಡ್ರೋಕ್ಲೋರಿಕ್ ಆಮ್ಲದ ಅನುಪಸ್ಥಿತಿಯಲ್ಲಿ ಕಾರ್ಯ ನಿರ್ವಹಿಸದ ಕಿಣ್ವ

(1) ಪೆಟ್ಯಲಿನ್ (2) ಟ್ರಿಪ್ಸಿನ್ (3) ಪೆಪ್ಸಿನ್ (4) ಕೊಲಾಜನ್

140. ಅಂಗಾಂಶಗಳಿಗೆ ಶಕ್ತಿ, ಸ್ಥಿತಿಸ್ಥಾಪಕತ್ವ ಮತ್ತು ನಮ್ಯತೆಯನ್ನು ಒದಗಿಸುವ ನಾರಿನ ಅಂಗಾಂಶ

(1) ಇಲಾಸ್ಟಿನ್
(2) ಅಡಿಪೋಸ್ ಅಂಗಾಂಶ
(3) ಇಲಾಸ್ಟಿನ್ ಮತ್ತು ಕೊಲಾಜನ್
(4) ಏರೋಲಾರ್ ಅಂಗಾಂಶ

141. ಲಡಾಕ್‌ನಲ್ಲಿರುವ ಪ್ಯೂಗ ಕಣಿವೆ ಈ ವಿಧದ ವಿದ್ಯುತ್ ಉತ್ಪಾದನೆಗೆ ಸೂಕ್ತವಾಗಿದೆ

(1) ಸೌರ (2) ಭೂಗರ್ಭ ಉಷ್ಣ (3) ಪವನ (4) ಜಲವಿದ್ಯುತ್

142. ಒತ್ತಡದ ಚಿಕಿತ್ಸೆಗಾಗಿ ಬಳಸುವ ಔಷಧಿಗಳ ವರ್ಗ

(1) ನೋವು ನಿವಾರಕ (2) ನಂಜು ನಿರೋಧಕ (3) ಅಲರ್ಜಿ ನಿವಾರಕ (4) ಖಿನ್ನತೆ ಶಮನಕಾರಿ

143. ನೈಸರ್ಗಿಕ ಅನಿಲ, ಪೆಟ್ರೋಲ್ ಮತ್ತು ಕಲ್ಲಿದ್ದಲು ಈ ವಿಧದ ಇಂಧನದ ಗುಂಪಿಗೆ ಸೇರಿದೆ.

(1) ದ್ರವ ಇಂಧನ
(2) ಪಳೆಯುಳಿಕೆ ಇಂಧನ
(3) ವಿದ್ಯುತ್ ಇಂಧನ
(4) ಜೈವಿಕ ಇಂಧನ

144. ಅಯೋಡೆಕ್ಸ್‌ನಲ್ಲಿ ಅತಿ ಹೆಚ್ಚಾಗಿ ಬಳಸಲಾಗುವ ರಾಸಾಯನಿಕ ಔಷಧ

(1) ಮಿಥೈಲ್ ಸ್ಯಾಲಿಸಿಲೇಟ್
(2) ಇಥೈಲ್ ಸ್ಯಾಲಿಸಿಲೇಟ್
(3) ಅಸಿಟೈಲ್ ಸ್ಯಾಲಿಸಿಲಿಕ್ ಆಮ್ಲ
(4) α-ಹೈಡ್ರಾಕ್ಸೈಲ್ ಬೆನ್‌ಜೋಯಿಕ್ ಆಮ್ಲ

ಮಾರ್ಗದರ್ಶಿ ಸ್ಪರ್ಧಾ ಸರ್ಕಲ್
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

145. ಪರಿಸರ ವಿಜ್ಞಾನ ಅಧ್ಯಯನದಲ್ಲಿ ಸೃಜನಾತ್ಮಕ ಅಭಿವ್ಯಕ್ತಿಗೆ ಇದು ಉದಾಹರಣೆಯಲ್ಲ

(1) ಸೃಜನಾತ್ಮಕ ಕಾದಂಬರಿಗಳ ಓದುವಿಕೆ
(2) ತೇಪೆ ಚಿತ್ರಗಾರಿಕೆ ತಯಾರಿಕೆ
(3) ಪ್ರದರ್ಶನಾ ಕಲೆ
(4) ಕೈಗೊಂಬೆ ಪ್ರದರ್ಶನ

146. ಪರಿಸರ ವಿಜ್ಞಾನ ಕಲಿಕೆಯಲ್ಲಿ ವೀಕ್ಷಣೆ ಮೂಲಕ ಕಲಿಕೆಯ ಹಿಂದಿರುವ ಪ್ರಮುಖ ಪರಿಕಲ್ಪನೆ

(1) ತನ್ನ ಅನುಭವದ ಮೂಲಕ ಜ್ಞಾನದ ಸಂರಚನೆ ಮತ್ತು ಪುನರ್ರಚನೆ
(2) ಇತರರ ಅನುಭವದ ಮೂಲಕ ದೊರೆತ ಮಾಹಿತಿಯ ಸಂಗ್ರಹ
(3) ಪರಿಕಲ್ಪನೆಗಳ ಸೈದ್ಧಾಂತಿಕ ಅರ್ಥೈಸಿಕೊಳ್ಳುವಿಕೆ
(4) ಸ್ಮೃತಿಯಿಂದ ಜ್ಞಾನದ ಪುನಃಸ್ಮರಣೆ

147. ಪರಿಸರ ಅಧ್ಯಯನ ಬೋಧನೆಗೆ ಬಳಸುವ ಬೋಧನಾ ವಿಧಾನಗಳಲ್ಲಿ ಪ್ರಾಮುಖ್ಯತೆ ಪಡೆದಿರುವುದು

(1) ವಿದ್ಯಾರ್ಥಿಗಳನ್ನು ನಿಷ್ಕ್ರಿಯ ಆಲಿಸುವಿಕೆಗೆ ಅವಕಾಶ ಒದಗಿಸುವುದು
(2) ಶಿಕ್ಷಕರಿಗೆ ಅವರ ಇಚ್ಛೆಯಂತೆ ವಿವರಿಸುವ ಅವಕಾಶ ನೀಡುವುದು
(3) ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಒಗ್ಗೂಡಿ ಕಾರ್ಯ ನಿರ್ವಹಿಸುವ ಅವಕಾಶ ನೀಡುವುದು
(4) ವಿದ್ಯಾರ್ಥಿಗಳನ್ನು ಓದುವಿಕೆಯಿಂದ ಕಲಿಯುವ ಅವಕಾಶ ನೀಡುವುದು

148. ಪರಿಸರ ಅಧ್ಯಯನ ಬೋಧನೆಯಲ್ಲಿ ನಾವು ಮೌಲ್ಯಗಳನ್ನು ಅಳವಡಿಸಬೇಕು. ಏಕೆಂದರೆ

(1) ಪರಿಸರ ಅಧ್ಯಯನ ಕಲಿಕೆಯು ಪ್ರಮುಖವಾಗಿ ಮಗುವಿನ ಭಾವನಾತ್ಮಕ ವಲಯದ ಮೇಲೆ ಗಮನ ಕೇಂದ್ರೀಕರಿಸುತ್ತದೆ
(2) ಪರಿಸರ ಅಧ್ಯಯನ ಕಲಿಕೆಯು ಪ್ರಮುಖವಾಗಿ ಮಗುವಿನ ಜ್ಞಾನಾತ್ಮಕ ವಲಯದ ಮೇಲೆ ಗಮನ ಕೇಂದ್ರೀಕರಿಸುತ್ತದೆ
(3) ಪರಿಸರ ಅಧ್ಯಯನ ಕಲಿಕೆಯು ಹೆಚ್ಚಾಗಿ ಪರಿಸರದ ಪ್ರತಿಕೂಲಕ ವಿಪತ್ತುಗಳ ಮೇಲೆ ಕೇಂದ್ರೀಕರಿಸುತ್ತದೆ
(4) ಪರಿಸರ ಅಧ್ಯಯನ ಕಲಿಕೆಯು ಹೆಚ್ಚಾಗಿ ವೈಜ್ಞಾನಿಕ ಅಂಶಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ

149. ಪರಿಸರ ವಿಜ್ಞಾನ ಅಧ್ಯಯನದಲ್ಲಿ ಬೋಧನೆ ಕಲಿಕೆಯಲ್ಲಿ ಸಾಮಾನ್ಯವಾಗಿ ಬಳಸುವ ಪ್ರಶ್ನಾ ತಂತ್ರ

(1) ಉತ್ತೇಜನವನ್ನು ನಿಯಮಗಳಿಗನುಸಾರ ಒದಗಿಸುವುದು
(2) ತರಗತಿಯಲ್ಲಿ ಕುತೂಹಲವನ್ನು ಉಂಟುಮಾಡುವುದು
(3) ತರಗತಿಯಲ್ಲಿ ಶಿಸ್ತನ್ನು ಕಾಪಾಡುವುದು
(4) ಬೋಧನೆಯ ಕಡೆಗೆ ಮಕ್ಕಳ ಅವಧಾನವನ್ನು ಸೆಳೆಯುವುದು

150. ವಿಜ್ಞಾನ ಶಿಕ್ಷಕರು ಮಕ್ಕಳಿಗೆ ಮಾನವ ದೇಹದ ರೂಪರೇಖೆಯನ್ನು ನೀಡಿ, ಅದರಲ್ಲಿ ಜೀರ್ಣಾಂಗವ್ಯೂಹವನ್ನು ರಚಿಸಲು ಸೂಚಿಸುವರು. ಈ ಪ್ರಕ್ರಿಯೆಯ ಮುಖ್ಯ ಉದ್ದೇಶ

(1) ಚಿತ್ರರಚನಾ ಕೌಶಲವನ್ನು ಆಧರಿಸಿ ಕಲಿಯುವವನನ್ನು ಗುರ್ತಿಸುವುದು
(2) ಚಿತ್ರರಚನಾ ಪ್ರಕ್ರಿಯೆಯನ್ನು ಗಮನಿಸಿ ಮೌಲ್ಯೀಕರಿಸುವುದು
(3) ಘಟಕಾಂಶಗಳನ್ನು ಹೆಸರಿಸಿದ ಚಿತ್ರದ ಮೂಲಕ ಕಲಿಯುವವರನ್ನು ಪರೀಕ್ಷಿಸುವುದು
(4) ಚಿತ್ರರಚನೆಯ ಮೂಲಕ ಕಲಿಯುವವ ಸಂಗತಿಯ ಬಗ್ಗೆ ಹೊಂದಿರುವ ಅಂಶವನ್ನು ಹೊರತೆಗೆಯುವುದು



ಮಾರ್ಗದರ್ಶಿ ಸ್ಪರ್ಧಾ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ, 2ನೇ ಕ್ರಾಸ್, ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101




ಮಾರ್ಗದರ್ಶಿ ಸ್ಟಡಿ ಸರ್ಕಲ್- ಕೊಪ್ಪಳದಲ್ಲಿ
ತರಬೇತಿ ಪಡೆದು GPSTR ಪರೀಕ್ಷೆ ಬರೆದು ಶಿಕ್ಷಕರ
ಹುದ್ದೆ ಹಾಗೂ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ